# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 261 | Pages. 2 | Date: 31-08-2025, SUNDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 261 – ಪುಟಗಳು : 2 31-08-2025 ಭಾನುವಾರ | Ph: 8762954248 | ದರ : ₹1


# ಮಗನಿಗೆ ಬುದ್ಧಿ ಹೇಳು ಅಂದಿದ್ದೇ ತಪ್ಪಾಯಿತಾ?

## ಮಕ್ಕಳ ಜಗಳ ಪಾಲಕನ ಜೀವಕ್ಕೆ ಸಂಚಕಾರ| ಉದ್ವಿಗ್ನಗೊಂಡ ಅರಸೀಕೆರೆ ಬಡಾವಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಅನಾರೋಗ್ಯದಿಂದ ಬಳಲುತ್ತಿದ್ದ ಮಗನ ಜೊತೆ ನಿನ್ನ ಮಗ ಜಗಳವಾಡಿದ್ದು ಆತನಿಗೆ ಬುದ್ಧಿ ಹೇಳು ಎಂಬ ಸಣ್ಣ ವಿಚಾರಕ್ಕೆ ವ್ಯಕ್ತಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೈದಿರುವ ಹೃದಯ ವಿದ್ರಾವಕ ಘಟನೆ ನಗರದ ಮುಜಾವರ ಮೊಹಲ್ಲಾದಲ್ಲಿ ನಡೆದಿದೆ.

ನಗರದ ತೌಫಿಕ್ (28) ಮೃತ ವ್ಯಕ್ತಿ. ಅಬ್ದುಲ್ ಫರಾನ್ ಪ್ರಮುಖ ಆರೋಪಿ. ತೌಫಿಕ್ ವೆಲ್ಡಿಂಗ್ ಕೆಲಸ ಮಾಡುತ್ತಿದ್ದರು. ಮೃತ ತೌಫಿಕ್ ಪುತ್ರ ಹಾಗೂ ಫರಾನ್ ಪುತ್ರ ನಗರದ ಖಾಸಗಿ ಶಾಲೆಯಲ್ಲಿ ಒಂದನೇ ತರಗತಿ ತರಗತಿ ಓದುತ್ತಿದ್ದಾರೆ.

ಕಳೆದ ವಾರ ಜ್ವರದಿಂದ ಬಳಲುತ್ತಿದ್ದ ತೌಫಿಕ್ ಪುತ್ರನಿಗೆ ಫರಾನ್ ಪುತ್ರ ನೀರು ಎರಚಿದ್ದ. ಈ ವಿಚಾರವನ್ನು ಮಕ್ಕಳು ಮನೆಯವರಿಗೆ ಹೇಳಿದ್ದರು. ಆ. 25 ರಂದು ಮಗನಿಗೆ ಇಡ್ಲಿ ತರಲು ಬಿ.ಎಚ್. ರಸ್ತೆಯ ಹೋಟೆಲ್‌ಗೆ ಬಂದಿದ್ದ ವೇಳೆ ಲಸ್ಸಿ ಪಾಯಿಂಟ್ ಬಳಿ ತೌಫಿಕ್ ಹಾಗೂ ಫರಾನ್ ಮುಖಾಮುಖಿಯಾಗಿದ್ದರು.

ಆಗ ನಿನ್ನ ಪುತ್ರ, ಹುಷಾರಿಲ್ಲದ ನನ್ನ ಮಗನಿಗೆ ತಣ್ಣೀರು ಎರಚಿದ್ದಾನೆ ಅವನಿಗೆ ಬುದ್ಧಿ ಹೇಳು ಎಂದು ತೌಫಿಕ್ ಫರಾನ್‌ಗೆ ಹೇಳಿದ್ದ. ಅಷ್ಟಕ್ಕೇ ಸಿಟ್ಟಾದ ಫರಾನ್ ಜೊತೆಗಿದ್ದ ಅರ್ಮಿನ್, ಫೈರೋಜ್, ಇರ್ಮಾನ್, ಸಲ್ಮಾನ್, ಆಟೋ ಅಡ್ಡು, ಗೌಸ್, ನೂರ್, ಮುನ್ನ ಎಂಬುವರ ಜೊತೆ ಸೇರಿ ತೌಫಿಕ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ತಳ್ಳಿದ್ದರು. ಏಳೆಂಟು ಅಡಿ ಎತ್ತರದ ಮೆಟ್ಟಿಲುಗಳಿಂದ ತೌಫಿಕ್ ಬಿದ್ದಿದ್ದರಿಂದ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು. ವಿಷಯ ತಿಳಿದು ಸ್ಥಳಕ್ಕೆ ಓಡಿ ಬಂದ ತೌಫಿಕ್ ಸಹೋದರ ತನ್ವೀರ್‌ಗೂ ಫರಾನ್ ಮತ್ತವರ ತಂಡ ಮನಬಂದಂತೆ ಥಳಿಸಿತ್ತು.



ಅದಾದ ಬಳಿಕ ಗಂಭೀರ ಗಾಯಗೊಂಡಿದ್ದ ತೌಫಿಕ್‌ನನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ನಂತರ ನಿಮ್ಹಾನ್ಸ್‌ಗೆ ದಾಖಲಿಸಲಾಗಿತ್ತು. ಅಷ್ಟರಲ್ಲಿ ತೌಫಿಕ್ ಕೋಮಾಗೆ ಜಾರಿದ್ದರು.

ವಾಪಸ್ ಹಾಸನಕ್ಕೆ ಕರೆತಂದು ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಿಸದೆ ಶುಕ್ರವಾರ ರಾತ್ರಿ ಮೃತಪಟ್ಟರು.

ಸ್ಥಳೀಯ ಶಾಸಕ ಕೆ.ಎಂ. ಶಿವಲಿಂಗೇಗೌಡ, ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಮೊದಲಾದವರು ಮೃತನ ಅಂತಿಮ ದರ್ಶನ ಪಡೆದರು. ಈ ವೇಳೆ ಮಾತನಾಡಿದ ಶಾಸಕ, ನಗರ ಠಾಣೆ ಇನ್ಸ್‌ಪೆಕ್ಟರ್ ಜಿ.ಕೆ. ರಾಘವೇಂದ್ರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಮಾರಣಾಂತಿಕ ಹಲ್ಲೆ ಆಗಿದ್ದರೂ ಕೇಸ್ ದಾಖಲು ಮಾಡಿಲ್ಲ. ಹಲ್ಲೆ ಮಾಡಿದ ಆರೋಪಿಗಳನ್ನೂ ಕೂಡಲೇ ಬಂಧಿಸದೆ ಘಟನೆ ಆದ ಮೇಲೆ ಕೇಸ್ / ಕೌಂಟರ್ ಕೇಸ್ ಮಾಡಿ ಬಿಟ್ಟು ಕಳುಹಿಸಿದ್ದಾರೆ ಎಂದು ಕಿಡಿಕಾರಿದರು.



ತೌಫಿಕ್ ತುಂಬಾ ಒಳ್ಳೆಯ ಹುಡುಗನಾಗಿದ್ದು, ಹಲ್ಲೆ ಮಾಡಿದವರು ಪ್ರಭಾವಿಗಳಿದ್ದಾರೆ. ಬಡ ಕುಟುಂಬ ಯಜಮಾನನ್ನ ಕಳೆದುಕೊಂಡು ಅನಾಥವಾಗಿದ್ದು, ಆ ಕುಟುಂಬಕ್ಕೆ ನೆರವಿನ ಭರವಸೆ ನೀಡಿದರು. ಇನ್ಸ್‌ಪೆಕ್ಟರ್ ವಿರುದ್ಧ ಹಲವು ದೂರಗಳಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಆಗಬೇಕೆಂದರು.

ಎನ್.ಆರ್. ಸಂತೋಷ್ ಮಾತನಾಡಿ, ಕಳೆದ 1 ವರ್ಷದಿಂದ ಅರಸೀಕೆರೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅಪರಾಧ ಪ್ರಕರಣ ಹೆಚ್ಚುತ್ತಲೇ ಇದ್ದರೂ ಪೊಲೀಸರು ಬಿಗಿ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ಇದೀಗ 9 ಮಂದಿ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

### ಬೂದಿ ಮುಚ್ಚಿದ ಕೆಂಡ ಪರಿಸ್ಥಿತಿ

ತೌಫಿಕ್ ಸಾವಿನಿಂದ ರೊಚ್ಚಿಗೆದ್ದ ಸಂಬಂಧಿಕರು ಹಾಗೂ ಸ್ನೇಹಿತರು ಫರಾನ್ ಮನೆ ಜಖಂಗೊಳಿಸಿ, ಕಿಟಕಿ ಗಾಜುಗಳನ್ನು ಪುಡಿ ಪುಡಿ ಮಾಡಿ ಮನೆ ಮುಂದೆ ನಿಲ್ಲಿಸಿದ್ದ ಕಾರಿಗೆ ಬೆಂಕಿ ಹಚ್ಚಿ ದಾಂಧಲೆ ನಡೆಸಿದ್ದಾರೆ. ಅದರಿಂದ ಮುಜಾವರ್ ಮೊಹಲ್ಲಾದಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಇನ್ಸ್‌ಪೆಕ್ಟರ್ ರಾಘವೇಂದ್ರ ವಿರುದ್ಧ ಗರಂ ಆಗಿರುವ ಸ್ಥಳೀಯರು, ಹಲ್ಲೆ ನಂತರ ದೂರು ಕೊಟ್ಟರೂ ತೆಗೆದುಕೊಂಡಿಲ್ಲ. ದೊಂಬಿ ಗಲಭೆ ಎಂದು ಕೇಸ್ ಮಾಡಿ ಸ್ಟೇಷನ್ ಬೇಲ್ ನೀಡಿದ್ದಾರೆ. ಬೇಜವಾಬ್ದಾರಿ ಅಧಿಕಾರಿಯನ್ನು ಅಮಾನತು ಮಾಡಿ ಎಂದು ಆಗ್ರಹಿಸಿದ್ದಾರೆ.

### ಪೋಷಕರ ಸಹನೆ ಮಕ್ಕಳ ಭವಿಷ್ಯ ಕಟ್ಟುವ ಸೇತುವೆ



ಪೋಷಕರು ಮಕ್ಕಳ ಜೀವನದ ಮೊದಲ ಗುರುಗಳು, ಮಾರ್ಗದರ್ಶಕರು ಮತ್ತು ಪ್ರೇರಣೆಯ ಮೂಲ. ಅವರು ಮಕ್ಕಳ ತಪ್ಪುಗಳನ್ನು ಸಹನೆ ಮತ್ತು ಪ್ರೀತಿಯಿಂದ ಸರಿಪಡಿಸಿ, ಸಂವಾದದ ಮೂಲಕ ವಿಶ್ವಾಸವನ್ನು ಬೆಳೆಸಬೇಕು. ಹೋಲಿಕೆಯ ಬದಲು ಪ್ರತಿಯೊಬ್ಬ ಮಗುವಿನ ವೈಶಿಷ್ಟ್ಯತೆಗಳನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಮಕ್ಕಳು ಆತ್ಮವಿಶ್ವಾಸದಿಂದ ಬೆಳೆದಂತೆ, ಉತ್ತಮ ನಾಗರಿಕರಾಗುತ್ತಾರೆ. ಪೋಷಕರ ನಡವಳಿಕೆ ಮಾದರಿಯಾದಾಗ, ಮಕ್ಕಳು ಸಹ ಅದನ್ನು ಅನುಸರಿಸಿ ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಿ ಹೊರ ಹೊಮ್ಮುತ್ತಾರೆ.

– ವಿ. ಅಂತೋಣಿ,
ಆಂಗ್ಲ ಶಿಕ್ಷಕರು ಸ್ಕಾಲರ್ಸ್ ಶಾಲೆ, ಹಾಸನ

## ಮಾನವೀಯತೆ ಮೆರೆದ ಸಂಸದ ಶ್ರೇಯಸ್ ಪಟೇಲ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಹೊಳೆನರಸೀಪುರ: ಸಿಮೆಂಟ್ ಚೀಲ ಸಾಗಿಸುತ್ತಿದ್ದ ಟಾಟಾ ಏಸ್ ವಾಹನ ನಿಯಂತ್ರಣ ತಪ್ಪಿ ಮಗುಚಿ ಬಿದ್ದು ಗಾಯಗೊಂಡಿದ್ದ ಚಾಲಕನನ್ನು ಸಂಸದ ಶೇಯಸ್ ಪಟೇಲ್ ಅವರು ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದಿದ್ದಾರೆ.

ಹಾಸನ ತಾಲ್ಲೂಕಿನ ಕಾಮಸಮುದ್ರ, ಪಾಳ್ಯ ಬಳಿ ಸಿಮೆಂಟ್ ಚೀಲ ತುಂಬಿಕೊಂಡು ಸಾಗಿಸುತ್ತಿದ್ದ ವೇಳೆ ಟಾಟಾ ಏಸ್‌ವಾಹನ ಮಗುಚಿಬಿದ್ದ ಪರಿಣಾಮ ಚಾಲಕ ಗಾಯಗೊಂಡಿದ್ದ. ಇದೇ ವೇಳೆಗೆ ರಾಷ್ಟ್ರೀಯ ಹೆದ್ದಾರಿ-373 ರಲ್ಲಿ ಸಂಚರಿಸುತ್ತಿದ್ದ ಸಂಸದ ಶ್ರೇಯಸ್ ಪಟೇಲ್ ಅವರು ಕೂಡಲೇ ತಮ್ಮ ಕಾರಿನಿಂದ ಇಳಿದು ಗಾಯಾಳು ಚಾಲಕನನ್ನು ಆಸ್ಪತ್ರೆಗೆ ಸಾಗಿಸುವ ಮೂಲಕ ಮಾನವೀಯತೆ ಮೆರೆದರು. ಮಾತ್ರವಲ್ಲ ಕೆಲಹೊತ್ತು ಘಟನಾ ಸ್ಥಳದಲ್ಲೇ ನಿಂತು ರಸ್ತೆಯಲ್ಲಿ ಚೆಲ್ಲಾಡಿದ್ದ ಸಿಮೆಂಟ್ ಚೀಲಗಳನ್ನು ಸ್ಥಳೀಯರ ಮೂಲಕ ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸಿಮೆಂಟ್ ತುಂಬಿದ ವಾಹನ ಪಲ್ಟಿಯಾಗಲು ಚಲಿಸುತ್ತಿದ್ದಾಗಲೇ ಟಯರ್ ಸಿಡಿದು ಅವಘಡ ಸಂಭವಿಸಿದೆ ಎನ್ನಲಾಗಿದೆ.

## ನಿವೃತ್ತ ಮುಖ್ಯ ಶಿಕ್ಷಕ ಕೆ. ಲಕ್ಷ್ಮೇಗೌಡ ನಿಧನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೊಳೆನರಸೀಪುರ: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಹಳೇಕೋಟೆ ಹೋಬಳಿ ಕಬ್ಬಿನಹಳ್ಳಿ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ಕೆ. ಲಕ್ಷ್ಮೇಗೌಡ (87) ಶನಿವಾರ ನಿಧನರಾದರು.

ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಹಾಗೂ ಮುಖ್ಯೋಪಾಧ್ಯಾಯರಾಗಿ ಮೊಸಳೆಹೊಸಳ್ಳಿ, ಮುತ್ತಿಗೆ ಹಿರೇಹಳ್ಳಿ, ದುಂಡನಾಯಕನಹಳ್ಳಿ, ಸಕಲೇಶಪುರದ ಮಾರನಹಳ್ಳಿಯಲ್ಲಿ ಸೇವೆ ಸಲ್ಲಿಸಿದ್ದರು.

ಪುತ್ರ, ಹಾಸನ ತಾಲ್ಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಕೆ.ಎಲ್. ರಮೇಶ್, ಇಬ್ಬರು ಪುತ್ರಿಯರು ಹಾಗು ಪತ್ನಿಯನ್ನು ಅಗಲಿದ್ದಾರೆ. ಆ. 31ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

## ಧರ್ಮಸ್ಥಳ ವಿರುದ್ಧ ಷಡ್ಯಂತ್ರ ಕೊನೆಯಾಗಲಿ




ಹಾಸನ: ಧರ್ಮಸ್ಥಳ ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಅಪಪ್ರಚಾರಕ್ಕೆ ಕೊನೆ ಹಾಡಬೇಕು. ಪ್ರಜ್ಞಾವಂತ ನಾಗರಿಕರು ಕ್ಷೇತ್ರಕ್ಕೆ ಆಗುತ್ತಿರುವ ಷಡ್ಯಂತ್ರ ಖಂಡಿಸಬೇಕು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಕ್ಷೇತ್ರಕ್ಕೆ ಆಗುತ್ತಿರುವ ಅನ್ಯಾಯ ಖಂಡಿಸಿ ಆ. 31ರಂದು ಜೆಡಿಎಸ್‌ನಿಂದ ಸತ್ಯಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು ಅವರು ಭಾಗವಹಿಸಲಿದ್ದು ಬೆಳಿಗ್ಗೆ 8 ಗಂಟೆಗೆ ಕಂದಲಿಯ ಯಗಚಿ ಶಾಲಾ ಆವರಣದಲ್ಲಿ ಎಲ್ಲರಿಗೂ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯಿಂದ 5 ಸಾವಿರ ಕಾರ್ಯಕರ್ತರು ಪಾಲ್ಗೊಳ್ಳಲಿದ್ದು ಎಲ್ಲರೂ ಅವರವರ ವಾಹನದಲ್ಲೇ ಬರುತ್ತಾರೆ. ಪಕ್ಷದಿಂದ ಯಾವ ಖರ್ಚನ್ನು ಯಾತ್ರೆಗಾಗಿ ವಿನಿಯೋಗಿಸುತ್ತಿಲ್ಲ. ಶ್ರೀ ಮಂಜುನಾಥಸ್ವಾಮಿ ಭಕ್ತರು ಸ್ವಯಂ ಪ್ರೇರಣೆಯಿಂದ ಬರುತ್ತಾರೆ. ಸಕಲೇಶಪುರ ಹಾಗೂ ಬೇಲೂರಿನ ಕಾರ್ಯಕರ್ತರು ಅಲ್ಲಿಂದಲೇ ತೆರಳುವುದರಿಂದ ಅವರು ಹಾಸನಕ್ಕೆ ಬರುವುದಿಲ್ಲ. ಉಳಿದ ತಾಲ್ಲೂಕಿನ ಕಾರ್ಯಕರ್ತರು ಕಂದಲಿಯಲ್ಲಿ ಸಮಾವೇಶಗೊಂಡು ಒಟ್ಟಾಗಿ ಪ್ರಯಾಣಿಸುತ್ತೇವೆಂದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಧರ್ಮಸ್ಥಳದ ಪಾವಿತ್ರ್ಯ ಹಾಗು ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ವ್ಯಕ್ತಿತ್ವ ಹಾಳು ಮಾಡಲು ಯಾರೆಲ್ಲ ಕಿಡಿಗೇಡಿಗಳು ಪ್ರಯತ್ನ ಮಾಡಿದ್ದರೋ, ಅವರಲ್ಲಿ ಕೆಲವರ ಬಂಧನ ಆಗಿದೆ. ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತಿರುವವರ ಮುಖವಾಡ ಕಳಚಬೇಕು. ಎಸ್‌ಐಟಿ ಮಾತ್ರವಲ್ಲದೆ ಎನ್‌ಐಎ ತನಿಖೆ ಮೂಲಕ ಷಡ್ಯಂತ್ರದ ರೂವಾರಿಗಳನ್ನು ಬಯಲಿಗೆ ತರಬೇಕೆಂದು ಒತ್ತಾಯಿಸಿದರು.

ಧರ್ಮಸ್ಥಳದ ನೇತ್ರಾವತಿ ಬಳಿ ವಾಹನಗಳ ಪಾರ್ಕಿಂಗ್ ಮಾಡಿ ಬಳಿಕ ಕಾಲ್ನಡಿಗೆಯಲ್ಲಿ ದೇವಸ್ಥಾನಕ್ಕೆ ತೆರಳಿ ಮಂಜುನಾಥನ ಆಶೀರ್ವಾದ ಪಡೆಯಲಾಗುವುದು. ನಂತರ ವಿರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿದ ಬಳಿಕ ಸಾರ್ವಜನಿಕ ಸಮಾರಂಭದಲ್ಲಿ ಪಾಲ್ಗೊಳ್ಳಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಎಸ್. ದ್ಯಾವೇಗೌಡ, ವಕೀಲ ಮಂಜುನಾಥ್, ಶೇಷಾದ್ರಿ ಇದ್ದರು.

## ಸುಳ್ಳು ಆರೋಪ ಖಂಡಿಸಿ ಮಾನನಷ್ಟ ಮೊಕದ್ದಮೆ: ಎಚ್ಚರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಸತಿ ಯೋಜನೆ ಮನೆ ಹಂಚಿಕೆಯಲ್ಲಿ ಅಕ್ರಮದಲ್ಲಿ ನಾನು ಶಾಮೀಲಾಗಿದ್ದೇನೆಂದು ಸುಳ್ಳು ಆರೋಪಗಳ ಮೂಲಕ ತೇಜೋವಧೆ ಮಾಡುತ್ತಿರುವ ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ವಿರುದ್ಧ ಸೋಮವಾರ ಹೈಕೋರ್ಟ್‌ನಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ 94 ಮನೆಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಈ ಸಂಬಂಧ ಗ್ರಾಪ ಅಭಿವೃದ್ಧಿ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನನ್ನ ಗಮನಕ್ಕೆ ಬಾರದೆ ನಡೆದಿರುವ ಅಕ್ರಮದಲ್ಲಿ ನಾನು ಶಾಮೀಲಾಗಿದ್ದೇನೆಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ. ಮಾನ, ಮರ್ಯಾದೆ ಇದ್ದರೆ ಸೂಕ್ತ ದಾಖಲಾತಿ ಸಮೇತ ಮಾತನಾಡಬೇಕು. ಪಿಡಿಒ ಯಾರೆಂದು ನನಗೆ ಗೊತ್ತಿಲ್ಲ, ಈ ಹಿಂದೆ ಕರ್ತವ್ಯ ಲೋಪ ಆರೋಪದಡಿ ಚುನಾವಣಾ ಆಯೋಗ ಆತನನ್ನು ಅಮಾನತು ಮಾಡಿತ್ತು. ಅಂತವರ ಸಹವಾಸ ನಾನು ಇಟ್ಟುಕೊಳ್ಳುವುದಿಲ್ಲ. ಎನ್.ಆರ್. ಸಂತೋಷ್ ಮಾತನಾಡುವ ಮುನ್ನ ಪೂರ್ವಾಪರ ತಿಳಿದಿರಬೇಕು ಎಂದು ತಿರುಗೇಟು ನೀಡಿದರು.

ಜಿಲ್ಲಾ ಪಂಚಾಯಿತಿ ಹಂಗಾಮಿ ನೌಕರ ರಾಜೇಶ್ ಎಂಬಾತನ ಕುಮ್ಮಕ್ಕಿನಿಂದ ಜಿಲ್ಲಾದ್ಯಂತ ಈ ಅಕ್ರಮ ನಡೆದಿದೆ. ಒಂದೇ ಲಾಗಿನ್ ಬಳಸಿ ನಕಲಿ ಫಲಾನುಭವಿಗಳ ಪಟ್ಟಿ ಸೃಷ್ಟಿಸಿ ಮೇಲಧಿಕಾರಿಗಳ ದಿಕ್ಕುತಪ್ಪಿಸಿ ಅಕ್ರಮ ಎಸಗಿದ್ದಾರೆ. ಅರಸೀಕೆರೆ ತಾಲ್ಲೂಕಿನ ಬಾಣಾವರ ಗ್ರಾಪಂನಲ್ಲಿ ಮಾತ್ರ ಅವ್ಯವಹಾರ ನಡೆದಿದೆ. ಉಳಿದ 35 ಗ್ರಾ.ಪಂ.ನಲ್ಲಿ ಈ ರೀತಿ ಆಗಿಲ್ಲವೆಂದರು.




> ವಸತಿ ಯೋಜನೆ ಅಕ್ರಮದಲ್ಲಿ ಭಾಗಿಯಾಗಿರುವುದು ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆಯುವೆ ಎಂದಿದ್ದೇನೆ, ಬಾಣಾವರ ಗ್ರಾಪಂ ಪಿಡಿಒ ನಿಯೋಜನೆಗೆ ಶಿಫಾರಸು ಮಾಡಿಲ್ಲ. ಮೌಖಿಕ ಸೂಚನೆಯನ್ನೂ ಕೊಟ್ಟಿಲ್ಲ.
>
> – ಕೆ.ಎಂ. ಶಿವಲಿಂಗೇಗೌಡ, ಶಾಸಕ

ಮಾನ ಮರ್ಯಾದೆ ಇಲ್ಲದೆ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ಹಾಸನದಲ್ಲಿ ಜೆಡಿಎಸ್ ಮುಖಂಡ ಎಂದು ಹೇಳಿಕೊಳ್ಳುವ ಆತ ಬೆಂಗಳೂರು, ದೆಹಲಿಯಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಜೊತೆಗಿರುತ್ತಾನೆ. ಆತನ ಪಕ್ಷ ಯಾವುದೆಂಬುದು ಗೊಂದಲವಿದೆ. ಬಾಣಾವರ ಗ್ರಾಮ ಪಂಚಾಯಿತಿ ಅಧ್ಯಕ್ಷ ಜೆಡಿಎಸ್ ಬೆಂಬಲಿತರಾಗಿದ್ದಾರೆ. ಅಕ್ರಮ ನಡೆದಿರುವ ಕುರಿತು ಅವರಿಗೆ ಗೊತ್ತಿರುವುದಿಲ್ಲವೇ, ಇಲ್ಲಿ ಶಾಸಕರ ಪಾತ್ರ ಏನಿದೆ ಎಂಬುದನ್ನು ತಿಳಿಯುವ ತಾಳ್ಮೆ ಇರಬೇಕಿತ್ತಲ್ಲವೇ ಎಂದು ಗುಡುಗಿದರು.

## ಹಳೆಯ ದ್ವೇಷ: ಪಿಡಿಒಗಳ ಹೊಡೆದಾಟ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರ ಮನೆಗೆ ಊಟಕ್ಕೆ ಬಂದಿದ್ದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಬ್ಬರು ಪರಸ್ಪರ ಹೊಡೆದಾಡಿಕೊಂಡಿರುವ ಘಟನೆ ತಾಲ್ಲೂಕಿನ ಗೋವಿನಕೆರೆ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಹಿರೀಸಾವೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸತೀಶ ಹಾಗೂ ಎಂ. ಶಿವರ ಗ್ರಾ.ಪಂ. ಪಿಡಿಒ ರಾಮಸ್ವಾಮಿ ನಡುವೆ ಜಗಳ ನಡೆದಿದೆ. ಸತೀಶ ಅವರ ತಲೆಗೆ ಮದ್ಯದ ಬಾಟಲಿಯಿಂದ ರಾಮಸ್ವಾಮಿ ಹೊಡೆದಿದ್ದಾರೆ.

ಎಂ. ಶಿವರ ಗ್ರಾ.ಪಂ. ಸದಸ್ಯ, ಗೋವಿನಕೆರೆ ಗ್ರಾಮದ ರಾಮು ಅವರ ಮನೆಗೆ ಗಣೇಶ ಹಬ್ಬದ ನಿಮಿತ್ತ ಊಟಕ್ಕೆಂದು ಸತೀಶ ಬಂದಿದ್ದರು. ರಾಮು, ರಘು ಅವರು ಮದ್ಯ ಸೇವನೆ ಮಾಡುತ್ತಾ ಕುಳಿತಿದ್ದಾಗ ಆಹ್ವಾನದ ಮೇರೆಗೆ ರಾಮಸ್ವಾಮಿ ಸಹ ಬಂದಿದ್ದರು. ತಾಲ್ಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆ ವಿಚಾರವಾಗಿ ಅಧಿಕಾರಿಗಳಿಬ್ಬರ ನಡುವೆ ವೈಮನಸ್ಸು ಉಂಟಾಗಿ ಮಾತನಾಡುತ್ತಿರಲಿಲ್ಲ. ಮದ್ಯ ಸೇವನೆ ಮಾಡುತ್ತಾ ಕುಳಿತಿದ್ದಾಗ ರಾಮು, ಶಿವರಾಜ್ ಅವರು ಜಗಳ ಬಿಟ್ಟು ಇಬ್ಬರು ಮಾತನಾಡಿಕೊಂಡಿರಿ ಎಂದು ಸಲಹೆ ನೀಡಿದ್ದಾರೆ. ಅದಕ್ಕೆ ಸತೀಶ್, ಅದರ ಬಗ್ಗೆ ಈಗ ಮಾತನಾಡುವುದು ಬೇಡ ಸುಮ್ಮನಿರಿ ಎಂದಿದ್ದಾರೆ. ಅಷ್ಟಕ್ಕೆ ಆಕ್ರೋಶಗೊಂಡ ರಾಮಸ್ವಾಮಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಎದುರಿಗೆ ಇದ್ದ 750 ಎಂ.ಎಲ್.ನ ಮ್ಯಾನ್ಷನ್ ಹೌಸ್ ಬ್ರಾಂಡಿ ಗಾಜಿನ ಬಾಟಲಿಯಿಂದ ತಲೆಗೆ ಹೊಡೆದಿದ್ದಾರೆ. ಗಾಜಿನ ಚೂರು ಮುಖಕ್ಕೆ ಬಿದ್ದು ಏಟಾಗಿದೆ. ಜೊತೆಗಿದ್ದವರೂ ಜಗಳ ಬಿಡಿಸಿ ಇಬ್ಬರನ್ನೂ ಅಲ್ಲಿಂದ ಕಳುಹಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಾಷ್ಟ್ರೀಯ ಮಟ್ಟದ ಕರಾಟೆ: ಪ್ರಶಸ್ತಿ

ಹಾಸನ: ಆಂಧ್ರ ಪ್ರದೇಶದ ತಿರುಪತಿ ಜಿಲ್ಲೆ ಸತ್ಯವೇದುನಲ್ಲಿ ರಾಷ್ಟ್ರೀಯ ಕರಾಟೆ ಸ್ಪೋರ್ಟ್ಸ್ ಸಂಸ್ಥೆಯಿಂದ ಇತ್ತೀಚೆಗೆ ನಡೆದ ಪ್ರಥಮ ರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಜಿಲ್ಲೆಯ ಕರಾಟೆ ಪಟುಗಳು ಉತ್ತಮ ಸಾಧನೆ ಮಾಡಿದ್ದಾರೆ.

ಹಾಸನದ ಮಹರಾಜ ಪಾರ್ಕ್ ಅಮೆಚೂರ್ ಬಾಡಿ ಬಿಲ್ಡರ್ ಸಂಸ್ಥೆಯ ಕರಾಟೆ ಪಟುಗಳು ಕಥಾ ಹಾಗು ಕುಮಿತೆಯಲ್ಲಿ ಪ್ರಥಮ ಹಾಗು ದ್ವಿತಿಯ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.




ಆರ್ಯನ್ ಬಿ.ವಿ. ಪ್ರಥಮ, ಹರ್ಷಿತ್‌ಗೌಡ ಪ್ರಥಮ, ಕೆ.ಪಿ. ತೇಜಸ್ ಪ್ರಥಮ, ಜಯಂತ್‌ಗೌಡ ದ್ವಿತೀಯ, ಎಂ. ಸುಹಾಸ್ ದ್ವಿತೀಯ, ಧನುಷ್ ದ್ವಿತೀಯ, ಹೆಚ್.ವಿ. ದಶ್ವಂತ್ ದ್ವಿತೀಯ ಸ್ಥಾನ ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

## ಎತ್ತಿನಹೊಳೆ ಮರಳು ಅಕ್ರಮ: ಲೋಕಾಯುಕ್ತ ಅಧಿಕಾರಿಗಳ ಭೇಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎತ್ತಿನಹೊಳೆ ಯೋಜನೆ ಕಾಮಗಾರಿಗೆ ವಾಮ ಮಾರ್ಗದಲ್ಲಿ ಮರಳು ತರಿಸಿಕೊಳ್ಳಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ ಶುಕ್ರವಾರ ಲೋಕಾಯುಕ್ತ ಅಧಿಕಾರಿಗಳು ಸಕಲೇಶಪುರದ ವಿಶ್ವೇಶ್ವರಯ್ಯ ಜಲ ನಿಗಮ ಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಕಲ್ಪಿಸುವ ಉದ್ದೇಶದಿಂದ ಕೈಗೊಂಡಿರುವ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಅವ್ಯವಹಾರ ನಡೆದಿದೆಯೆಂದು ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ಮಾಜಿ ರಾಜ್ಯ ಸಂಚಾಲಕ ಎಸ್. ಮೊಹಮ್ಮದ್ ಸಾಧಿಕ್ 2018ರಲ್ಲಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.



ಕಾಮಗಾರಿಗಾಗಿ ಮರಳು ಒದಗಿಸಲು 2017ರಲ್ಲೇ ಲೋಕೋಪಯೋಗಿ ಇಲಾಖೆ ಟೆಂಡರ್ ನಡೆಸಿತ್ತು. ಎತ್ತಿನಹೊಳೆ ಯೋಜನೆ ಅಧಿಕಾರಿಗಳು 5 ಪ್ಯಾಕೇಜ್‌ನಿಂದ 49 ಸಾವಿರ ಕ್ಯೂಬಿಕ್ ಮೀಟರ್ ಮರಳು ಬಳಕೆ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯ ಸುಪರ್ದಿಯಲ್ಲಿದ್ದ ಮರಳು ಬ್ಲಾಕ್‌ಗಳಿಂದ ಸುಮಾರು 45 ಸಾವಿರ ಕ್ಯೂ.ಮೀ. ಮರಳನ್ನು ಕಳ್ಳತನದಿಂದ ತಂದಿರುವುದು ತಿಳಿದುಬಂದಿದೆ. ಕೇವಲ 2400 ಕ್ಯೂಬಿಕ್ ಮೀ. ಮರಳಿಗೆ ಪರವಾನಗಿ ಪಡೆದು ಉಳಿದ ಮರಳನ್ನು ಎಲ್ಲಿಂದ ತಂದರೆಂಬುದರ ಕುರಿತು ತನಿಖೆಗೆ ಸಾದಿಕ್ ಆಗ್ರಹಿಸಿದ್ದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಾರ್ಗಸೂಚಿ ಪ್ರಕಾರ ಒಂದು ಪರ್ಮಿಟ್ ಇಲ್ಲದ ವಾಹನಗಳಿಗೆ 50 ಸಾವಿರದಿಂದ 1 ಲಕ್ಷ ರೂ. ವರೆಗೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಸರ್ಕಾರಕ್ಕೆ 7 ರಿಂದ 8 ಕೋಟಿ ರೂ. ದಂಡ ಪಾವತಿಸಬೇಕಾಗುತ್ತದೆ. 2018ರಲ್ಲಿ ನಾನು ದೂರು ಕೊಟ್ಟಿದ್ದೆ. ಅಕ್ರಮದಲ್ಲಿ ಗುತ್ತಿಗೆದಾರರು ಹಾಗೂ ಎಂಜಿನಿಯರ್‌ಗಳು ಶಾಮೀಲಾಗಿದ್ದು ಎಲ್ಲರನ್ನು ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

## ಅಕ್ಷರ ಅಕಾಡೆಮಿಯಿಂದ ವಿದ್ಯಾರ್ಥಿಗಳಿಗೆ ಪುರಸ್ಕಾರ

ಹಾಸನ: ಜಿಲ್ಲೆಯ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಸೆ.14 ರಂದು ಅಕ್ಷರ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೆ.14 ರಂದು ಬೆಳಗ್ಗೆ 10.30ಕ್ಕೆ ನಗರದ ಗಾಂಧಿ ಭವನದಲ್ಲಿ ಅಕ್ಷರ ಪುರಸ್ಕಾರ ನಡೆಯಲಿದೆ. ರೊ.ಪಾಲಾಕ್ಷ, ಡಾ.ಸೌಮ್ಯಮಣಿ ಮೊದಲಾದವರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಿದ್ದಾರೆ. ಅರ್ಜಿ ಸಲ್ಲಿಸಲು ಸೆ.10 ಕಡೆಯ ದಿನವಾಗಿದ್ದು, ಅಕ್ಷರ ಬುಕ್‌ಹೌಸ್, ಅಕ್ಷರ ಅಕಾಡೆಮಿ ಹಾಗು ಬಟ್ಟೆ ಅಂಗಡಿಯಲ್ಲಿ ಅರ್ಜಿ ಸಿಗಲಿವೆ ಎಂದು ತಿಳಿಸಿದರು.




ಶೇ.70 ಅಂಕ ಪಡೆದಿರುವ ಸರ್ಕಾರಿ ಶಾಲೆ-ಕಾಲೇಜುಗಳ ಮಕ್ಕಳು ಹಾಗು ಶೇ.80 ಅಂಕಗಳಿಸಿರುವ ಖಾಸಗಿ ಶಿಕ್ಷಣ ಸಂಸ್ಥೆ ಮಕ್ಕಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಜಿಲ್ಲೆಯೊಳಗೆ ಓದಿರಬೇಕು. ಬಹುಮಾನ ಪಡೆಯಲು ವಿದ್ಯಾರ್ಥಿಗಳು ಅಥವಾ ಪೋಷಕರು ಬರಬೇಕು. ಈ ಬಾರಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯ ತಲಾ 250 ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲು ನಿರ್ಧರಿಸಲಾಗಿದೆ. ಮಕ್ಕಳ ಅಂಕಪಟ್ಟಿಗೆ ಶಾಲಾ ಮುಖ್ಯೋಪಾಧ್ಯಾಯರು, ಕಾಲೇಜಿನ ಪ್ರಾಂಶುಪಾಲರ ಸಹಿ ಇರಬೇಕು. ಆಧಾರ್ ಕಾರ್ಡ್ ಜೆರಾಕ್ಸ್, ಒಂದು ಭಾವಚಿತ್ರ ಸಲ್ಲಿಸಬೇಕು ಎಂದು ಹೇಳಿದರು.

ಅಕ್ಷರ ಬುಕ್‌ಹೌಸ್ ಕಳೆದ ಹತ್ತು ವರ್ಷಗಳಿಂದ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸದಾಶಯದಿಂದ ಅಕ್ಷರ ಪುರಸ್ಕಾರ ನಡೆಸಿಕೊಂಡು ಬರಲಾಗುತ್ತಿದೆ. ಅಕ್ಷರ ಬುಕ್‌ಹೌಸ್ ಕಳೆದ 10 ವರ್ಷಗಳಿಂದ ಹಾಸನದಲ್ಲಿ ಓದುಗರಿಗೆ, ಸಾಹಿತ್ಯಾಸಕ್ತರಿಗೆ, ವಿದ್ಯಾರ್ಥಿಗಳಿಗೆ ಓದಿನ ಸವಿ ನೀಡುತ್ತಿದೆ. ನಮ್ಮ ಈ ಕಾರ್ಯಕ್ಕೆ ರೋಟರಿ ರಾಯಲ್ಸ್‌ನವರು ಕೈಜೋಡಿಸಿದ್ದಾರೆ. ವಿದ್ಯಾರ್ಥಿಗಳಿಗೆ ಪುಸ್ತಕ ನೀಡುತ್ತಿರುವುದು ಅವರವರ ಮನೆಯಲ್ಲಿ ಪುಟ್ಟದೊಂದು ಗ್ರಂಥಾಲಯ ಆಗಬೇಕು ಎಂಬ ಸದುದ್ದೇಶ ನಮ್ಮದು ಎಂದರು.

ಅಕ್ಷರ ಅಕಾಡೆಮಿ ವ್ಯವಸ್ಥಾಪಕ ಮಂಜು, ರೋಟೇರಿಯನ್‌ಗಳಾದ ಸಚಿನ್, ನವೀನ್, ಶ್ರೀಧರ್, ಬಟ್ಟೆ ಅಂಗಡಿ ಭಾಸ್ಕರ್ ಇದ್ದರು.

# ಹಾಸನದಲ್ಲಿ ಸಮರ್ಪಕ ಕಸ ಸಂಗ್ರಹಕ್ಕಾಗಿ ಜಿಪಿಎಸ್ ನೆರವು

## ಸಂತೆಪೇಟೆಯಲ್ಲಿ ಸಿಸಿಟಿವಿ ಕ್ಯಾಮರಾ | ಚಾಲಕರ ಆಟಾಟೋಪಕ್ಕೆ ಕಡಿವಾಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರದಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದು ಕಸ ಸಂಗ್ರಹ ಆಟೋಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂಬ ಗಂಭೀರ ಆರೋಪ ಕೇಳಿಬಂದ ಹಿನ್ನಲೆಯಲ್ಲಿ ಎಲ್ಲಾ ವಾಹನಗಳಿಗೆ ಜಿಪಿಎಸ್ ಅಳವಡಿಸಿ ಅವುಗಳ ಮೇಲ್ವಿಚಾರಣೆಗೆ ಮಹಾನಗರ ಪಾಲಿಕೆ ಕ್ರಮ ಕೈಗೊಂಡಿದೆ.

ನಗರದ 35 ವಾರ್ಡ್ ಹಾಗೂ ಇತ್ತೀಚೆಗೆ ಪಾಲಿಕೆಗೆ ಸೇರ್ಪಡೆಯಾಗಿರುವ 37 ಹಳ್ಳಿಗಳಲ್ಲಿ ಕಸ ಸಂಗ್ರಹ ಜವಾಬ್ದಾರಿಯನ್ನು ಪಾಲಿಕೆ ಮಾಡುತ್ತಿದೆ. ಅದಕ್ಕಾಗಿ 52 ಆಟೋ ಹಾಗೂ 2 ಟಿಪ್ಪರ್ ಗಳನ್ನು ನಿಯೋಜಿಸಲಾಗಿದೆ. ಪ್ರತಿ ಆಟೋ ದಿನಕ್ಕೆ 3 ಟ್ರಿಪ್ ಕಸ ಸಂಗ್ರಹ ಮಾಡಬೇಕು. ಅಂದರೆ ಒಂದು ವಾರ್ಡ್ ಗೆ ಮೂರು ಬಾರಿ ಭೇಟಿ ನೀಡಬೇಕೆಂಬ ಕಟ್ಟುನಿಟ್ಟಿನ ಆದೇಶ ಮಾಡಲಾಗಿದೆ. ಆದರೆ ಬಹುತೇಕ ಆಟೋ ಚಾಲಕರು ಕೇವಲ ಒಂದು ಟ್ರಿಪ್ ಕಸ ಸಂಗ್ರಹಿಸಿ ನಂತರ ವಾಹನ ನಿಲ್ಲಿಸಿ ಬಿಡುತ್ತಿದ್ದರು. ಈ ಬಗ್ಗೆ ಪಾಲಿಕೆ ಸದಸ್ಯರು ಹಾಗು ಸಾರ್ವಜನಿಕರಿಂದ ದೂರು ಕೇಳಿಬಂದ ಹಿನ್ನಲೆಯಲ್ಲಿ ಎಲ್ಲಾ ಆಟೋಗಳಿಗೆ ಜಿಪಿಎಸ್ ಅಳವಡಿಸಿದ್ದು ವಾಹನ ಎಲ್ಲಿದೆ ಎಂಬುದನ್ನು ಸುಲಭವಾಗಿ ತಿಳಿಯಲಾಗುತ್ತಿದೆ. ಜಿಪಿಎಸ್ ಅಳವಡಿಕೆ ಬಳಿಕ ಚಾಲಕರ ಆಟಾಟೋಪಕ್ಕೆ ಕಡಿವಾಣ ಬಿದ್ದಂತಾಗಿದೆ.

ಜೊತೆಗೆ ಸಂತೆಪೇಟೆಯ ತ್ಯಾಜ್ಯ ಸಂಗ್ರಹ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿದ್ದು ಸಮಯ ವ್ಯರ್ಥ ಮಾಡುವ ಸಿಬ್ಬಂದಿಯ ಮೇಲೆ ಪಾಲಿಕೆ ಅಧಿಕಾರಿಗಳು ಹದ್ದಿನ ಕಣ್ಣಿಟ್ಟಿದ್ದಾರೆ. ಮತ್ತೊಂದೆಡೆ ಸಂತೆಪೇಟೆಯಿಂದ ಅಗಿಲೆ ನೆಲಭರ್ತಿ ಘಟಕಕ್ಕೆ ತ್ಯಾಜ್ಯ ಹೊತ್ತೊಯ್ಯುವ ಟಿಪ್ಪರ್‌ಗಳಿಗೂ ಜಿಪಿಎಸ್ ಹಾಕಲಾಗಿದ್ದು ಸಂಚಾರದಲ್ಲಿ ವಿಳಂಬವಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

### ಎಷ್ಟೇ ಬಿಗಿ ಮಾಡಿದರೂ ಮುಗಿಯದ ಗೋಳು

ನಗರದಲ್ಲಿ ಸ್ವಚ್ಛತೆ ಕಾಪಾಡಬೇಕೆಂಬ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಎಷ್ಟೇ ಬಿಗಿ ನಿಯಮ ಕೈಗೊಂಡರೂ ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿಲ್ಲ. ರಸ್ತೆಯ ಎಲ್ಲೆಂದರಲ್ಲಿ ಕಸದ ರಾಶಿ ಬಿದ್ದಿದ್ದು ತೆರವು ಮಾಡುವುದು ಅಪರೂಪವಾಗಿದೆ. ಕೆಲವು ವಾರ್ಡ್‌ಗಳಲ್ಲಿ ಕಸ ಸಂಗ್ರಹ ಆಟೋಗಳು ಬೆಳಿಗ್ಗೆ 10 ಗಂಟೆ ಬಳಿಕ ಬರುವುದರಿಂದ ಸಾರ್ವಜನಿಕರು ಕಸ ಹಾಕಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಅವರು ರಸ್ತೆಬದಿ ಕಸ ಸುರಿಯುವ ರೂಢಿ ಬೆಳೆಸಿಕೊಂಡಿದ್ದಾರೆ. ಸಾರ್ವಜನಿಕ ಸ್ಥಳದಲ್ಲಿ ಕಸ ಸುರಿಯುವವರಿಗೆ ದಂಡ ವಿಧಿಸುವ ಅವಕಾಶ ಇದೆಯಾದರೂ ಅಧಿಕಾರಿಗಳು ಅದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹೀಗಾಗಿ ನಗರದ ಎಲ್ಲಾ ಕಡೆ ಅನೈರ್ಮಲ್ಯ ತಾಂಡವವಾಡುತ್ತಿದ್ದು ಬೀದಿ ಬದಿ ನಾಯಿಗಳ ಹಾವಳಿ ಹೆಚ್ಚಾಗಿರುವುದು ಮಾತ್ರವಲ್ಲದೆ ದುರ್ವಾಸನೆಗೆ ಮೂಗು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ನಗರದ 80 ಅಡಿ ರಸ್ತೆ, ಉತ್ತರ ಬಡಾವಣೆ, ಪೆನ್ಷನ್ ಮೊಹಲ್ಲಾ, ಚಿಪ್ಪಿನಕಟ್ಟೆ, ಸಿದ್ದಯ್ಯ ನಗರ, ಹೇಮಾವತಿ ನಗರ ಸೇರಿದಂತೆ ಅನೇಕ ಬಡಾವಣೆಗಳಲ್ಲಿ ಕಸದ ರಾಶಿ ಮಿತಿ ಮೀರಿದ್ದು ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆ ಹೇಳತೀರದಾಗಿದೆ.

ಕಾರ್ಮಿಕರಿಗೆ ಸುರಕ್ಷತಾ ಪರಿಕರಗಳಿಲ್ಲ:

ಇನ್ನು ಕಸ ಸಂಗ್ರಹ ಹಾಗೂ ವಿಲೇವಾರಿ ಕಾರ್ಯದಲ್ಲಿ ನಿರತರಾಗಿರುವ ಕಾರ್ಮಿಕರಿಗೆ ಸುರಕ್ಷತಾ ಪರಿಕರಗಳೇ ಇಲ್ಲದಾಗಿದೆ. ಕಸ ಸಂಗ್ರಹಕ್ಕೆ ಆಟೋದಲ್ಲಿ ಬರುವ ಕಾರ್ಮಿಕರು ಮಾಸ್ಕ್, ಶೂ, ಕೈ ಗವಸು ಧರಿಸದೆ ತ್ಯಾಜ್ಯ ಶೇಖರಿಸುತ್ತಾರೆ. ಇನ್ನು ಸಂತೆಪೇಟೆಯಲ್ಲಿ ತ್ಯಾಜ್ಯ ಬೇರ್ಪಡಿಸುವ ಸಿಬ್ಬಂದಿಯ ಪರಿಸ್ಥಿತಿಯೂ ಹೇಳತೀರದಾಗಿದೆ. ಸಾಕಷ್ಟು ಕ್ಲಿಷ್ಟಕರ ಸನ್ನಿವೇಶದಲ್ಲಿ ಅಲ್ಲಿನ ಕಾರ್ಮಿಕರು ಕೆಲಸ ಮಾಡುತ್ತಿದ್ದು ಅಗತ್ಯ ಪರಿಕರಗಳನ್ನು ನೀಡುವತ್ತ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕಿದೆ.

# ಜೆಡಿಎಸ್‌ನಿಂದ ಇಂದು ಧರ್ಮಸ್ಥಳ ಚಲೋ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಹಿಂದು ಪವಿತ್ರ ಧಾರ್ಮಿಕ ಕ್ಷೇತ್ರವಾದ ಧರ್ಮಸ್ಥಳದ ಬಗ್ಗೆ ಕೆಲವರು ಮಾಡುತ್ತಿರುವ ಅಪಪ್ರಚಾರ ಹಾಗೂ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರಲು ನಡೆಸುತ್ತಿರುವ ಕುತಂತ್ರಗಳನ್ನು ಖಂಡಿಸಿ, ತಾಲ್ಲೂಕು ಜೆಡಿಎಸ್ ಆ.31 ರಂದು ಭಾನುವಾರ ಬೆಳಿಗ್ಗೆ ಶಾಸಕ ಎ. ಮಂಜು ನೇತೃತ್ವದಲ್ಲಿ ಧರ್ಮಸ್ಥಳ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ನರಸೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಧರ್ಮಸ್ಥಳವು ರಾಜ್ಯದವಲ್ಲದೆ ದೇಶದ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದ್ದು, ಅಪಾರ ಭಕ್ತರ ನಂಬಿಕೆಯ ಕ್ಷೇತ್ರವಾಗಿದೆ. ಇಂತಹ ಪವಿತ್ರ ಕ್ಷೇತ್ರದ ಬಗ್ಗೆ ಕೆಲವರು ಅಸತ್ಯ ಹಾಗೂ ದ್ವೇಷಪೂರ್ಣ ಪ್ರಚಾರ ನಡೆಸುತ್ತಿರುವುದು ಖಂಡನೀಯ. ಹಿಂದು ಧರ್ಮದ ಅವಹೇಳನ ಮಾಡಲು ರೂಪಿಸಿರುವ ಈ ಸಂಚನ್ನು ಖಂಡಿಸಲು ಜೆಡಿಎಸ್ ಈ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಭಾನುವಾರ ಬೆಳಿಗ್ಗೆ ಪಟ್ಟಣದ ಚಿಲುಮೆ ಮಠದ ಬಳಿಯಿಂದ ಹೊರಟು ಗ್ರಾಮ ದೇವತೆ ದೊಡ್ಡಮ್ಮ ದೊಡ್ಡಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿ ವಾಹನಗಳ ಮೂಲಕ ಧರ್ಮಸ್ಥಳಕ್ಕೆ ತೆರಳಲಾಗುವುದು. ಇದು ಕೇವಲ ರಾಜಕೀಯ ಕಾರ್ಯಕ್ರಮವಲ್ಲ, ನಮ್ಮ ಧರ್ಮ, ಸಂಸ್ಕೃತಿ ಹಾಗೂ ನಂಬಿಕೆಯನ್ನು ಕಾಪಾಡಿಕೊಳ್ಳುವ ಸಮೂಹ ಚಳವಳಿಯಾಗಿದ್ದು ಎಲ್ಲ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ಮುಖಂಡರಾದ ಎ.ಎಂ. ರಘು, ರವಿಕುಮಾರ್, ಜಬೀಉಲ್ಲಾ, ಮಂಜು ಕಾಕೋಡನಹಳ್ಳಿ ಹಾಜರಿದ್ದರು.

# ಶ್ರೀ ರಾಘವೇಂದ್ರ ಮಹಾತ್ಮೆ ಹೊಸ ಧಾರಾವಾಹಿ

## ಸೆಪ್ಟೆಂಬರ್ 1 ರಿಂದ ರಾತ್ರಿ 9ಗಂಟೆಗೆ ಜೀಕನ್ನಡ ವಾಹಿನಿಯಲ್ಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಬೇಡಿದ ವರಗಳ ಕರುಣಿಸುವ ಕಲಿಯುಗದ ಕಾಮಧೇನು ಶ್ರೀ ರಾಘವೇಂದ್ರ ಸ್ವಾಮಿಗಳ ಮಹಾತ್ಮೆ ಇದೇ ಸೆಪ್ಟೆಂಬರ್ 1 ರಿಂದ ಪ್ರಸಾರವಾಗಲಿದೆ.ಕರ್ನಾಟಕದ ಎಲ್ಲರ ಅಚ್ಚುಮೆಚ್ಚಿನ ವಾಹಿನಿ ಜೀ ಕನ್ನಡ ವಿಭಿನ್ನ ಕಥೆಗಳ ಮೂಲಕ ಪ್ರೇಕ್ಷಕರ ಹೃದಯಕ್ಕೆ ನಿರಂತರವಾಗಿ ಲಗ್ಗೆ ಇಡುತ್ತಾ ಬಂದಿದೆ. ಇದಕ್ಕೂ ಮೊದಲು ಉಘೆಉಘೆ ಮಾದೇಶ್ವರ ಮತ್ತು ವಿಷ್ಣು ದಶಾವತಾರ ಎಂಬ ಭಕ್ತಿ ಪ್ರಧಾನ ಧಾರಾವಾಹಿಗಳನ್ನು ನೀಡಿ ಕನ್ನಡಿಗರ ಮನಗೆದ್ದ ಜೀ ಕನ್ನಡ ಈಗ ಮತ್ತೊಂದು ಭಕ್ತಿ ಪ್ರಧಾನ ಧಾರಾವಾಹಿಯನ್ನು ಜನರ ಮುಂದಿಡಲು ಸಜ್ಜಾಗಿದೆ. ಟಶ್ರೀ ರಾಘವೇಂದ್ರ ಮಹಾತ್ಮೆಟಿ ಎಂಬ ಧಾರಾವಾಹಿ ಇದೇ ಸೆಪ್ಟೆಂಬರ್ 1 ರಿಂದ ರಾತ್ರಿ 9 ಗಂಟೆಗೆ ಜೀ ಕನ್ನಡದಲ್ಲಿ ಪ್ರಸಾರ ಆಗಲಿದೆ ಮತ್ತು ಇದರಲ್ಲಿ ರಾಯರ ಬಾಲ್ಯ, ಪವಾಡಗಳು ಮತ್ತು ಅವರ ಜೀವನದಲ್ಲಿ ನಡೆದ ಅನೇಕ ಕಥೆಗಳು ನಮಗೆ ಕಾಣಸಿಗಲಿದೆ.

ಜೀ ಕನ್ನಡವು ನಂಬಿಕೆ, ಸಂಪ್ರದಾಯ ಮತ್ತು ಸಂಸ್ಕೃತಿಯಲ್ಲಿ ಬೇರು ಬಿಟ್ಟಿರುವ ಭವ್ಯವಾದ ಕಥೆಗಳನ್ನು ನಿರಂತರವಾಗಿ ಪ್ರೇಕ್ಷಕರಿಗೆ ಕೊಡುವುದರ ಜೊತೆಗೆ ಅರ್ಥಪೂರ್ಣ ಮನರಂಜನೆಯನ್ನು ನೀಡುವ ತನ್ನ ಮುಖ್ಯ ಧ್ಯೇಯಕ್ಕೆ ಬದ್ಧವಾಗಿದೆ. ಈ ಪರಂಪರೆಯನ್ನು ಇನ್ನಷ್ಟು ಬಲಪಡಿಸುತ್ತಾ, ಜೀ ಕನ್ನಡ ಈಗ ?ಶ್ರೀರಾಘವೇಂದ್ರ ಮಹಾತ್ಮೆ? ಎಂಬ ಭಕ್ತಿಪರ ಧಾರಾವಾಹಿಯನ್ನು ಪ್ರೇಕ್ಷಕರಿಗೆ ನೀಡುತ್ತಿದೆ. ಇದು ಶ್ರೀ ರಾಘವೇಂದ್ರ ಸ್ವಾಮಿಗಳ ಅಸಾಮಾನ್ಯ ಜೀವನ ಯಾತ್ರೆಯನ್ನು ವಿವರಿಸುತ್ತದೆ. ರಾಯರ ಬಾಲ್ಯದಿಂದ ಹಿಡಿದು ಅವರ ಆತ್ಮ ಜಾಗೃತಿ, ಉಪದೇಶಗಳು, ಪವಾಡಗಳು ಮತ್ತು ಪರಂಪರೆ ಈ ಧಾರಾವಾಹಿಯಲ್ಲಿ ಕಾಣಸಿಗಲಿದೆ. ಕಥಾಶೈಲಿ, ಮತ್ತು ಭವ್ಯ ದೃಶ್ಯಾವಳಿಗಳ ಸಮನ್ವಯದೊಂದಿಗೆ ಈ ಧಾರಾವಾಹಿ ರಾಯರ ಆತ್ಮಚರಿತ್ರೆ ಮಾತ್ರವಲ್ಲದೆ ಜೀವನದ ಮೌಲ್ಯಗಳನ್ನು ವೀಕ್ಷಕರಿಗೆ ತಿಳಿಸುವಲ್ಲಿ ಯಶಸ್ವಿಯಾಗಲಿದೆ.

ಧಾರಾವಾಹಿಯಲ್ಲಿ ಪ್ರತಿಭಾನ್ವಿತ ತಾರಾಬಳಗ ಇದ್ದುಇದರ ನಿರ್ಮಾಣ ಮತ್ತು ಕ್ರಿಯೇಟಿವ್ ಹೆಡ್ ಆಗಿ ಮಹೇಶ್ ಸುಖಧರೆ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ನಿರ್ದೇಶನದ ಜವಾಬ್ದಾರಿಯನ್ನು ಟಾಲೆಂಟೆಡ್ ಆಕ್ಟರ್, ಡೈರೆಕ್ಟರ್ ನವೀನ್ ಕೃಷ್ಣ ಅವರು ಹೊತ್ತಿದ್ದಾರೆ. ಇನ್ನು ಈ ಧಾರಾವಾಹಿಗೆ ಮಣಿಕಾಂತ್ ಕದ್ರಿ ಅವರ ಅಮೋಘ ಸಂಗೀತ ಇರಲಿದ್ದು ವಿಷ್ಣು ಪಾತ್ರದಲ್ಲಿ ಅಮಿತ್ ಕಶ್ಯಪ್ ಅವರು ನಟಿಸಿದ್ದಾರೆ. ಸಿರಿ ಪ್ರಹ್ಲಾದ್ ಲಕ್ಷ್ಮಿ ಪಾತ್ರದಲ್ಲಿ ನಟಿಸಿದ್ದು ವ್ಯಾಸರಾಯರ ಪಾತ್ರದಲ್ಲಿ ಪರೀಕ್ಷಿತ್ ಅವರು ಕಾಣಿಸಿಕೊಳ್ಳಲಿದ್ದಾರೆ. ಹಾಗೆಯೇ ವಿಕಾಸ್ ವಸಿಷ್ಠ, ದೀಪಿಕಾ, ಕಾರ್ತಿಕ್ ಸಾಮಗ, ಧನ್ಯಶ್ರೀ ಪ್ರಭು, ವಿಕ್ರಂಸೂರಿ, ಡಾ.ಸಂಜಯ್, ಸ್ನೇಹಾ ಹೆಗ್ಡೆ, ಶ್ರೀನಿಧಿ, ಶ್ರೀಲತಾ, ಅನುರಾಗ್ ಸೇರಿ ಅನೇಕ ಪ್ರತಿಭಾನ್ವಿತ ಕಲಾವಿದರ ದಂಡು ಕಾಣಸಿಗಲಿದೆ. ಅಷ್ಟೇ ಅಲ್ಲದೆ, ಹಿರಣ್ಯ ಕಶ್ಯಪುವಾಗಿ ಚೆಲುವರಾಜು, ಕಯಾದು ಆಗಿ ಲೂಸಿಯಾ ಚೆಲುವೆ ಶ್ರುತಿಹರಿಹರನ್ ಈ ಧಾರಾವಾಹಿಯಲ್ಲಿ ನಟಿಸಿದಲ್ಲಿದ್ದಾರೆ. ಇನ್ನು ರಾಯರು ಯಾರು ಎಂಬುದಕ್ಕೆ ಉತ್ತರ ಮುಂದಿನ ದಿನಗಳಲ್ಲಿ ಸಿಗಲಿದೆ. ಒಟ್ಟಿನಲ್ಲಿ ಇದು ಪ್ರೇಕ್ಷಕರಿಗೆ ಮನರಂಜನೆಯ ಹಬ್ಬವನ್ನು ಕೊಡುವುದಂತೂ ಗ್ಯಾರಂಟಿ.

?ಶ್ರೀರಾಘವೇಂದ್ರ ಮಹಾತ್ಮೆ? ಕೇವಲ ಪೌರಾಣಿಕ ಕಥೆಯಾಗಿರದೆ ಈಗಿನ ಜನಾಂಗಕ್ಕೆ ನಮ್ಮ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವತ್ತ ಪ್ರಯತ್ನ ಮಾಡಲಿದೆ. ಉನ್ನತ ಮಟ್ಟದ ಟೆಕ್ನಾಲಜಿ, ಭವ್ಯಸೆಟ್ಟಳು ಮತ್ತು ಗಟ್ಟಿಯಾದ ಕಥಾಹಂದರದೊಂದಿಗೆ ಈ ಧಾರಾವಾಹಿ ಕನ್ನಡ ಪೌರಾಣಿಕ ಕಥನ ಶೈಲಿಗೆ ಹೊಸ ಅರ್ಥ ನೀಡಲು ಸಜ್ಜಾಗಿದೆ.

ಇದೇ ಸೆಪ್ಟೆಂಬರ್ 1 ರಿಂದ, ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9 ಗಂಟೆಗೆ ಪ್ರಸಾರ ಆಗಲಿರುವ ಟಶ್ರೀ ರಾಘವೇಂದ್ರ ಮಹಾತ್ಮೆಟಿ ಧಾರಾವಾಹಿಯನ್ನು ನೋಡಲು ಮರೆಯದಿರಿ.

# ಬೇಕರಿ, ಹೋಟೆಲ್‌ಗಳಲ್ಲಿ ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಕಲಗೂಡು : ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಹೋಟೆಲ್ ಮತ್ತು ಬೇಕರಿಗಳಲ್ಲಿ ಕಡ್ಡಾಯವಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಸಾರ್ವಜನಿಕ ವಿಶ್ವಾಸಾರ್ಹವನ್ನು ಮೂಡಿಸಬೇಕೆಂದು ಬೇಕರಿ, ಹೋಟೆಲ್ ಮಾಲೀಕರಿಗೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಹೇಳಿದರು.

ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಇಲಾಖೆ ಮತ್ತು ಆರೋಗ್ಯ ಇಲಾಖೆ ಜಂಟಿಯಾಗಿ ಪಟ್ಟಣದ ವಿವಿಧ ಬೇಕರಿ, ಹೋಟೆಲ್‌ಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ಇಂದು ಎರಡು ಹೋಟೆಲ್, ಒಂದು ಸ್ವೀಟ್ ಅಂಗಡಿ, ಪಿಜ್ಜಾ ಸೆಂಟರ್ ಹಾಗೂ 11 ಬೇಕರಿಗಳಿಗೆ ಭೇಟಿ ನೀಡಿದ ವೇಳೆ ಆಹಾರ ಸಿದ್ಧಪಡಿಸುವ ಸ್ಥಳ ತುಂಬಾ ಮಲೀನವಾಗಿರುವುದು ಕಂಡುಬಂದಿತು. ಆಹಾರ ಸಿದ್ಧಪಡಿಸುವ ಪರಿಕರಗಳು ಸ್ವಚ್ಛವಾಗಿಲ್ಲದಿರುವುದು ಸೇರಿ ಶುದ್ಧ ನೀರು ಬಳಕೆ ಇಲ್ಲದಿರುವುದನ್ನು ನೋಡಿ ಗಾಬರಿ ಉಂಟಾಯಿತು. ಇನ್ನೂ ಮುಂದೆ ಈ ರೀತಿ ನಿರ್ಲಕ್ಷ್ಯತೆ ವಹಿಸಿದರೇ ಬಾಗಿಲು ಮುಚ್ಚಿಸುವ ಜೊತೆಗೆ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು ಎಂದು ಮಾಲೀಕರಿಗೆ ಎಚ್ಚರಿಕೆ ನೀಡಿದರು.

ಕೆಲವೊಂದು ಬೇಕರಿ, ಹೋಟೆಲ್ ಗಳಲ್ಲಿ ಬಳಕೆ ಮಾಡುತ್ತಿರುವ ಆಹಾರ ಪದಾರ್ಥಗಳಲ್ಲಿ ಕಲ್ಮಶಗಳು ಮತ್ತು ಇತರೆ ಅಪಾಯಕಾರಿ ವಸ್ತುಗಳ ಬಳಕೆಯನ್ನು ಗಮನಿಸಲಾಗಿದೆ. ಇವುಗಳನ್ನು ಕಡ್ಡಾಯವಾಗಿ ಬಳಕೆ ಮಾಡಬಾರದು. ಆಹಾರ ಸುರಕ್ಷತೆ ಮತ್ತು ಪೋಷಣೆಯುಕ್ತ ಪದಾರ್ಥಗಳನ್ನು ಬಳಕೆ ಮಾಡಬೇಕು. ಬಳಕೆ ಮಾಡುವ ಪದಾರ್ಥಗಳ ಉತ್ಪಾದನೆ ದಿನಾಂಕ, ಎಕ್ಸ್‌ಪೈರಿ ದಿನಾಂಕ ಗಮನಿಸಿ ಬಳಕೆ ಮಾಡಬೇಕು. ಕಡ್ಡಾಯವಾಗಿ ಬೇಕರಿ ತಿನಿಸುಗಳನ್ನು ತಯಾರಿಸುವ ಪರಿಕರಗಳ ಸ್ವಚ್ಛತೆಯನ್ನು ಪಾಲನೆ ಮಾಡಬೇಕಿದೆ ಎಂಬ ತಿಳಿವಳಿಕೆ ನೀಡಲಾಯಿತು ಎಂದರು.

ಇಂದು ಭೇಟಿ ನೀಡಿದ ಬೇಕರಿ, ಹೋಟೆಲ್‌ಗಳ ಪೈಕಿ ಸ್ಥಳೀಯ ಪಪಂ ವತಿಯಿಂದ ಪರವಾನಗಿ ಪಡೆದಿಲ್ಲದಿರುವುದು ಕಂಡುಬಂದಿತು. ರಸ್ತೆ ಬದಿಯಲ್ಲಿ ತಿಂಡಿ ತಿನಿಸುವ ಮಾರುವ ಗೂಡಂಗಡಿಗಳು ಸಹ ಪಡೆದಿಲ್ಲ. ಕಡ್ಡಾಯವಾಗಿ ಸ್ಥಳೀಯ ಸಂಸ್ಥೆ ಮತ್ತು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ವತಿಯಿಂದ ಅನುಮತಿ ಪಡೆಯಬೇಕಿದೆ. ಕೂಡಲೇ ಪಪಂ ಆರೋಗ್ಯ ನಿರೀಕ್ಷಕರನ್ನು ಒಳಗೊಂಡಂತೆ ಪಟ್ಟಣದ ಎಲ್ಲಾ ಬೇಕರಿ ಮಾಲೀಕರು, ಹೋಟೆಲ್ ಮಾಲೀಕರುಗಳು ಸಭೆಯನ್ನು ಕರೆದು ಆಹಾರ ಸುರಕ್ಷತೆ, ನಿರ್ವಹಣೆ ಕುರಿತಂತೆ ತಿಳಿವಳಿಕೆ ನೀಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಅಂಗಡಿಗಳು, ಹೋಟೆಲ್ ಮತ್ತು ಬೇಕರಿಗಳು, ಪಾನಿಪೂರಿ, ಗೋಬಿ, ರಸ್ತೆ ಬದಿಯ ಕ್ಯಾಂಟೀನ್ ಗಳಲ್ಲಿ ಪ್ಲಾಸ್ಟಿಕ್ ಬಳಕೆ ಅಧಿಕವಾಗಿ ಕಂಡುಬಂದಿದೆ. ಇಲ್ಲಿ ಸಿದ್ಧಗೊಳ್ಳುವ ಬಿಸಿಯಾದ ಆಹಾರವನ್ನು ಪ್ಲಾಸ್ಟಿಕ್ ಗೆ ಹಾಕಿ ಕೊಡಬಾರದು. ಇದು ಆರೋಗ್ಯಕ್ಕೆ ಹಾನಿಕರವಾಗಿದೆ. ಶಾಲಾ ಕಾಲೇಜು ಬಳಿ ಮಾದಕ ವಸ್ತುಗಳ ಮಾರಾಟ ಮಾಡಬಾರದು. ಇಂತಹ ಅಂಗಡಿಗಳ ಮೇಲೆ ದಾಳಿ ಮಾಡಲಾಗುವುದು ಎಂದು ಡಾ.ಪುಷ್ಪಲತಾ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿ ವಿನಯ್, ಆರೋಗ್ಯ ಇಲಾಖೆ ಅಧಿಕಾರಿಗಳಾದ ಪರಮೇಶ್, ಜಯರಾಮ್ ಇತರರು ಹಾಜರಿದ್ದರು.

# ಶಾಂತಿಯುತ ಈದ್ ಮಿಲಾದ್ ಆಚರಣೆಗೆ ಎಸ್ಪಿ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ಗಣೇಶ ಮೂರ್ತಿ ವಿಸರ್ಜನೆ ಹಾಗೂ ಸೆ. 5ರ ಈದ್ ಮಿಲಾದ್ ಹಬ್ಬವನ್ನು ಸಾರ್ವಜನಿಕರು ಶಾಂತಿಯುತವಾಗಿ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಹೇಳಿದರು. ಪಟ್ಟಣ ಹೊರ ವಲಯದಲ್ಲಿ ಭರತ್ ಕನ್ವೆನ್ಷನ್ ಸಭಾಂಗಣದಲ್ಲಿ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಬೇಲೂರು ಪೊಲೀಸ್ ಠಾಣೆ ವತಿಯಿಂದ ನಡೆಸಿದ ಸಭೆಯಲ್ಲಿ ಮಾತನಾಡಿ, ಸೆ. 5 ರಂದು ಈದ್ ಮಿಲಾದ್ ಹಬ್ಬವಿದೆ. ಶಾಂತಿ ಮತ್ತು ಸಾಮರಸ್ಯವನ್ನು ಪ್ರತಿಯೊಬ್ಬರು ಬಯಸುತ್ತಾರೆ. ಚಿಕ್ಕ ಮಕ್ಕಳಿಗೆ ದೊಡ್ಡ ಬಾವುಟಗಳನ್ನು ಕೊಡುವುದು ಮತ್ತು ಇನ್ನಿತರ ಪ್ರಚೋದನಕಾರಿ ಹೇಳಿಕೆಯನ್ನು ನೀಡುವುದು ಖಂಡನೀಯ. ಈ ಬಗ್ಗೆ ಪೊಲೀಸ್ ಇಲಾಖೆ ಜಾಗರೂಕತೆಯಿಂದ ಕೆಲಸ ಮಾಡುತ್ತಿದೆ. ಆಯೋಜಕರು ಪ್ರಚೋದನಾಕಾರಿ ಹೇಳಿಕೆಗೆ ಅವಕಾಶ ನೀಡಬಾರದು. ಅಲ್ಲದೆ ಸ್ಥಳೀಯರಲ್ಲದೆ ಹೊರಗಿನಿಂದ ಬಂದು ಇಲ್ಲಿನ ಸಾಮರಸ್ಯವನ್ನು ಕೆಡಿಸುವಂತಹ ವ್ಯಕ್ತಿಗಳ ವಿರುದ್ಧ ಪೊಲೀಸ್ ಇಲಾಖೆ ಕಠಿಣ ಕ್ರಮವನ್ನು ಕೈಗೊಳ್ಳುತ್ತದೆ ಎಂದ ಅವರು ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ಈ ಇಂದಿನಿಂದಲೂ ಕೂಡ ಪ್ರತಿಯೊಂದು ಹಬ್ಬಗಳು ಸಾಮರಸ್ಯದಿಂದ ನಡೆಯುತ್ತಿರುವುದು ನಿಜಕ್ಕೂ ಸಂತೋಷದ ವಿಚಾರ. ವಿಶೇಷವಾಗಿ ನಾನು ಹಾಸನದಲ್ಲಿ ಎಸ್ಪಿ ಆಗಿ ಅಧಿಕಾರ ವಹಿಸಿಕೊಂಡ ದಿನಗಳಿಂದಲೂ ಕೂಡ ಬೇಲೂರಿನಲ್ಲಿ ನಡೆಯುವ ದೊಡ್ಡ ಕಾರ್ಯಕ್ರಮಗಳು ಕೂಡ ಯಾವುದೇ ಅವಘಡಗಳು ಸಂಭವಿಸದೆ ಅತ್ಯಂತ ಸೌಹಾರ್ದತೆಯಿಂದ ನಡೆದಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ನಡೆಯುವ ಕಾರ್ಯಕ್ರಮಗಳು ಕೂಡ ಸುಸೂತ್ರವಾಗಿ ನಡೆಯಲಿ ಎಂಬುದು ನಮ್ಮ ಆಶಯವಾಗಿದೆ ಎಂದರು.

ಅರಸೀಕೆರೆ ಡಿವೈಎಸ್ಪಿ ಗೋಪಿ ಮಾತನಾಡಿ, ಈಗಾಗಲೇ ಗಣೇಶ ವಿಸರ್ಜನ ಮಹೋತ್ಸವ ನಡೆಯುತ್ತಿದ್ದು ಪೊಲೀಸ್ ಇಲಾಖೆ ನೀಡಿದ ಮುನ್ಸೂಚನೆಗಳಂತೆ ಆಯೋಜಕರು ಗಣೇಶ ವಿಸರ್ಜನೆ ನಡೆಸಬೇಕು ವಿಶೇಷವಾಗಿ ಸೆಪ್ಟೆಂಬರ್ 5 ರಂದು ಈದ್ ಮಿಲಾದ್ ಹಬ್ಬ ಇರುವ ಕಾರಣದಿಂದ ಅಂದು ಪಟ್ಟಣದಲ್ಲಿ ಸಂಪೂರ್ಣ ಗಣೇಶ ವಿಸರ್ಜನೆಯನ್ನು ಮುಂದೂಡಬೇಕು. ಪೊಲೀಸ್ ಬಂದೋಬಸ್ ಎಲ್ಲರಿಗೂ ಕೂಡ ಅಗತ್ಯವಾಗಿ ನೀಡಬೇಕಿದೆ. ಈ ಬಗ್ಗೆ ಸಾರ್ವಜನಿಕರು ಸಹಕಾರವನ್ನು ನೀಡಬೇಕು ಎಂದ ಅವರು ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆಗಳಿಗೆ ಪ್ರತ್ಯುತ್ತರ ಅಥವಾ ಪೋಸ್ಟ್ ಮಾಡುವುದನ್ನು ಮೊದಲು ಯುವಕರು ಕೈಬಿಡಬೇಕು ಇಲ್ಲವಾದರೆ ಸೈಬರ್ ಅಪರಾಧದ ಹಿನ್ನೆಲೆಯಲ್ಲಿ ಪ್ರಕರಣವನ್ನು ದಾಖಲಿಸಲಾಗುತ್ತದೆ ಮತ್ತು ಡಿಜೆ ಸೌಂಡ್ ಸಂಪೂರ್ಣ ನಿಷೇಧ ಇರುವುದರಿಂದ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಬೇಕು ಎಂದರು. ಬೇಲೂರು ವೃತ್ತ ಅರಕ್ಷಕ ನಿರೀಕ್ಷಕ ರೇವಣ್ಣ ಮತ್ತು ಆರಕ್ಷಕ ಉಪ ನಿರೀಕ್ಷಕ ಶಿವಾನಂದ ಪಾಟೀಲ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸೈಯದ್ ತೌಫಿಕ್, ಪುರಸಭಾ ಸದಸ್ಯ ಜಮಾಲ್ಲುದ್ದಿನ್, ಕರವೇ ಅಧ್ಯಕ್ಷ ಚಂದ್ರಶೇಖರ, ಲಕ್ಷ್ಮಿಪುರ ವೀರಾಜಂನೇಯಸ್ವಾಮಿ ದೇಗುಲ ಅಧ್ಯಕ್ಷ ಮೋಹನ್ ಕುಮಾರ್, ಮಸೀದಿ ಮುಖ್ಯಸ್ಥರು ವಿವಿಧ ಸಂಘಟನೆ ಮುಖಂಡರು ಹಾಜರಿದ್ದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-31

1422: ಹೆನ್ರಿ VI, ಬ್ರಿಟನ್ ದೇಶದ ಅರಸನಾದನು.

1803: ಲೂಯಿಸ್ ಮತ್ತು ಕ್ಲಾರ್ಕ್ ಅವರ ಅಮೆರಿಕದ ಪ್ರಸಿದ್ಧ ಅನ್ವೇಷಣಾ ಯಾತ್ರೆಯು ಮಿಸೌರಿ ರಾಜ್ಯದಲ್ಲಿ ಪ್ರಾರಂಭವಾಯಿತು.

1888: ಜಾಕ್ ದ ರಿಪರ್ (ack the Ripper ) ಎಂಬ ಹೆಸರಿನಲ್ಲಿ ಪ್ರಸಿದ್ಧನಾದ ಸರಣಿ ಕೊಲೆಗಾರನ ಮೊದಲ ಬಲಿ ಲಂಡನ್‌ನಲ್ಲಿ ಕಂಡುಬಂದಿತು.

1919: ಅಮೆರಿಕಾದ ಕಮ್ಯುನಿಸ್ಟ್ ಪಕ್ಷ (Communist Party of America ) ಸ್ಥಾಪನೆಯಾಯಿತು.

1957: ಮಲೇಶಿಯಾ ಬ್ರಿಟಿಷರ ಅಧೀನದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಗಳಿಸಿತು.

1980: ಪೋಲ್ಯಾಂಡ್‌ನಲ್ಲಿ Solidarity ಕಾರ್ಮಿಕ ಸಂಘಟನೆ ಕಾನೂನುಬದ್ಧವಾಗಿ ಮಾನ್ಯತೆ ಪಡೆದಿತು.

### ಜನನ

1870: ಮರಿಯ ಲೂಯಿಸೆ, ಜರ್ಮನಿಯ ಗಣ್ಯ ಲೇಖಕಿ

1928: ಜೇಮ್ಸ್ ಕಾಬರ್ನ್, ಅಮೆರಿಕ ನಟ

### ಮರಣ

1867: ಚಾರ್ಲ್ಸ್ ಬಾಡ್ಲೇರ್, ಫ್ರೆಂಚ್ ಕವಿ

1997: ಪ್ರಿನ್ಸೆಸ್ ಡಯಾನಾ, ಬ್ರಿಟಿಷ್ ರಾಜಕುಮಾರಿ

# ನಾಳೆಗಳು ನಮದೆನಿಸಿವೆ ಭರವಸೆಯ ನಾಳೆಗಳು

– ಗೊರೂರು ಅನಂತರಾಜು, ಹಾಸನ



ನಾಳೆಗಳು ನಮದೆನಿಸಿವೆ ಭರವಸೆಯ ನಾಳೆಗಳು ನಮದೆನಿಸಿವೆ.. ಎಂಬ ಒಂದು ಸೊಗಸಾದ ಹಾಡಿಗೆ ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕು ಕಲ್ಲುರೋಡ ಗ್ರಾಮದ ಮಹಾನಂದ ಮಠಪತಿ ಮೇಡಂ ತಮ್ಮ ಕಲೆಗಾರಿಕೆ ಫೋಟೋಗಳನ್ನು ಅಳವಡಿಸಿ ಒಂದು ವಿಡಿಯೋ ಮಾಡಿದ್ದು ಅದನ್ನು ಹೂವಿನಹಡಗಲಿಯ ಕತೆಗಾರ ಮಧುನಾಯ್ಕ್ ಲಂಬಾಣಿ ಗ್ರೂಪ್‌ನಲ್ಲಿ ಹಾಕಿದ್ದರು. ಅನಂತರಾಜ್ ಸರ್, ಚಿಕ್ಕಮಗಳೂರಿನಲ್ಲಿ ನಮ್ಮ ಕರ್ನಾಟಕ ಬರಹಗಾರರ ಸಂಘ ಚಿಕ್ಕಮಗಳೂರು ಜಿಲ್ಲಾ ಘಟಕದ ಸಹಕಾರದಲ್ಲಿ ಇತ್ತೀಚಿಗೆ ನಡೆಸಿತ್ತಲ್ಲಾ ರಾಜ್ಯ ಮಟ್ಟದ ಗಾಯನ ಸ್ಪರ್ಧೆ ಇಲ್ಲಿ ಭಾಗವಹಿಸಿದ್ದ ಗಾಯಕಿ ಮಹಾನಂದ ಮಠಪತಿ ಮಗಳು ನೃತ್ಯಗಾರ್ತಿ ಅಭಿಶ್ರೀ ಇವರ ಕಲಾ ಪರಿಚಯ ಮಾಡಿ ಎಂದು ಕೊಂಚವೆ ಮಾಹಿತಿ ಕಳಿಸಿದ್ದರು. ಅಲ್ಲಿ ತೀರ್ಪುಗಾರನಾಗಿ ಭಾಗವಹಿಸಿದ್ದ ನಾನು ಮೇಡಂ ಹಾಡನ್ನು ಆಗ ಕೇಳಿದ್ದೆ. ಆದರೆ ಪರಿಚಯ ಇರಲಿಲ್ಲ. ಮೇಡಂ ನಂಬರ್ ಪಡೆದು ಮಾತನಾಡುತ್ತಾ ಅವರು ತಮ್ಮ ಕಲಾ ಪರಿಚಯ ಹೇಳಿಕೊಂಡರು.

ನಾನು ಶಾಲಾ ದಿನಗಳಲ್ಲಿ ಭರತನಾಟ್ಯ, ಶ್ಲೋಕ, ವಚನ ಗಾಯನ, ಭಾವಗೀತೆ, ಜಾನಪದ ಗೀತೆ, ಭಕ್ತಿ ಗೀತೆ. ಹೀಗೆ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುತ್ತಿದ್ದೆ. ನಾನು ಹತ್ತನೇ ತರಗತಿ ಮುಗಿಸಿದ ನಂತರ ನನಗೆ 17 ವರ್ಷಕ್ಕೆ ನಮ್ಮ ಸಂಬಂಧಿಕರಲ್ಲಿ ಮದುವೆ ಮಾಡಿಕೊಡಲಾಯಿತು. ನನಗೆ ಏಳು ವರ್ಷಗಳ ಬಳಿಕ ಎರಡು ಅವಳಿ ಮಕ್ಕಳು ಹುಟ್ಟಿದರು. ಮಕ್ಕಳು ಹುಟ್ಟಿದ ಒಂದು ವರ್ಷಕ್ಕೆ ನನ್ನ ಪತಿಯನ್ನು ಕಳೆದುಕೊಂಡೆ. ನಂತರ ನಾನು ಮತ್ತೆ ಶಿಕ್ಷಣ ಮುಂದುವರಿಸಿದೆ. ಪಿಯುಸಿ, ಬಿಎ ಪರೀಕ್ಷೆ ಬರೆದೆ. ಲಾಕ್‌ಡೌನ್ ಸಮಯದಲ್ಲಿ ಮನೆಯಲ್ಲೇ ಭರತನಾಟ್ಯ ಹಾರ್ಮೋನಿಯಂ ಎರಡು ಮಕ್ಕಳಿಗೆ ಫೋನಲ್ಲಿ ನೋಡುತ್ತಾ ಕಲಿಸುತ್ತಿದ್ದೆ. ನಾವು ಗುರುಗಳ ಹತ್ತಿರ ಕಲಿಬೇಕು ಅಂದ್ರೆ ನಮಗೆ ಯಾವುದೇ ರೀತಿ ಅನುಕೂಲ ಇರಲಿಲ್ಲ. 2016 ರಿಂದ 2024ರ ವರೆಗೆ ಶಾಲಾ ಸಂಗೀತ ಶಿಕ್ಷಕಿಯಾಗಿ ಸೇವೆ ಮಾಡುತ್ತಿದ್ದೆ. ನನಗೆ ಭರತನಾಟ್ಯ ಮತ್ತು ಸಂಗೀತ ಅಂದರೆ ತುಂಬಾ ಆಸಕ್ತಿ ಇದೆ. ನನಗೆ ತಿಳಿದಿದ್ದು ಮಕ್ಕಳಿಗೆ ಕಲಿಸುತ್ತಿದ್ದೇನೆ. ಇದಕ್ಕೆ ನನ್ನ ತಂದೆ-ತಾಯಿ, ಅತ್ತೆ, ಸ್ನೇಹ ಬಳಗ ಸಹಾಯ ಮಾಡಿ ಪ್ರೋತ್ಸಾಹಿಸಿದ್ದಾರೆ. ಪ್ರತಿ ತಿಂಗಳು ನಮ್ಮ ಮನೆಯಲ್ಲಿ ಮಹಾಮನೆ ಕಾರ್ಯಕ್ರಮ ಅಂದರೆ ಬಸವಣ್ಣನವರ ಕುರಿತು ಸಾಮಾಜಿಕ ವಿಷಯಗಳ ಬಗ್ಗೆ ಅರಿವು ಮೂಡಿಸುವ ಚಿಂತನ ಕಾರ್ಯಕ್ರಮ ನಮ್ಮ ಮನೆಯವರು ಇದ್ದಾಗ ಮಾಡುತ್ತಿದ್ದರು. ಅದನ್ನು ಹಾಗೆ ಬಿಡುವುದು ಬೇಡ ಎಂದು ನಾನು ನನ್ನ ಜನ್ಮ ದಿನದಂದು ಈ ಕಾರ್ಯಕ್ರಮ ಮಾಡಿ ನನ್ನಂತೆಯೇ ಕಲಾಕ್ಷೇತ್ರದ ಸಾಧಕರನ್ನು ಸನ್ಮಾನಿಸಿರುವೆ. ನಾನು ಮಾಡಿರುವ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿತ್ತು ಅಂತ ಹೇಳಿದ್ದಾರೆ. ಊರಿನಲ್ಲಿ ಯಾವುದೇ ಒಂದು ಕಾರ್ಯಕ್ರಮ ಇರಲಿ ಆ ಎಲ್ಲಾ ಕಾರ್ಯಕ್ರಮಗಳಿಗೆ ನಮ್ಮನ್ನು ಕರೆಯುತ್ತಿದ್ದರು. ರಾಯಚೂರಿನ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ 353ನೇ ಶ್ರೀರಾಯರ ಆರಾಧನೆಯ ಕಾರ್ಯಕ್ರಮ ಅಂಗವಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳವರ ಮಠ ಹಾಗೂ ಚನ್ನರಾಯಪಟ್ಟಣದ ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಮಠದ ಮುಂಭಾಗ ರಾಜ ಬೀದಿಯಲ್ಲಿ ದೇಶ ವಿದೇಶದ 350 ನೃತ್ಯಗಾರರು ಏಕಕಾಲಕ್ಕೆ ನಾಮ ರಾಮಾಯಣಂ ನೃತ್ಯ ಪ್ರದರ್ಶಿಸಿ ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ 2024ರಲ್ಲಿ ಆಗಿದೆ. ಜಪಾನ್, ಜರ್ಮನಿ, ಇಂಡೋನೇಷಿಯಾ ದೇಶ ಸೇರಿದಂತೆ ಭಾರತ ದೇಶದ ಹಲವಾರು ರಾಜ್ಯದಿಂದ ಆಗಮಿಸಿದ ಕಲಾವಿದರಿಗೆ ರಾಯರ ದರ್ಶನ ಮಾಡಿಸುವ ಮೂಲಕ ಈ ನೃತ್ಯೋತ್ಸವ ಸಂಭ್ರಮ ರಾಯರ ಪಾದದಲ್ಲಿ ಸಮರ್ಪಣೆ ಮಾಡುವಲ್ಲಿ ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿಯ ಮುಖ್ಯಸ್ಥ ಅರವಿಂದಸಿಂಗ್, ಪ್ರಧಾನ ಕಾರ್ಯದರ್ಶಿ ಮತ್ತು ನೃತ್ಯಗಾರ್ತಿ ಸ್ವಾತಿ ಪಿ. ಭಾರದ್ವಾಜ್ ಅವರನ್ನು ಮರೆಯುವಂತಿಲ್ಲ. ಈ ತಂಡದಲ್ಲಿ ತಾಯಿ ಮಹಾನಂದ ಮಠಪತಿ ಮತ್ತು ಮಗಳು ಅಭಿಶ್ರೀ ಇದ್ದು ಸರ್ಟಿಫಿಕೇಟ್ ಪಡೆದಿದ್ದಾರೆ. ಇವರ ದೊಡ್ಡ ಮಗಳು ಅನುಶ್ರೀ ಹಾರ್ಮೋನಿಯಂ ಮತ್ತು ಪಿಯಾನ ಕಲಿಯುತ್ತಿದ್ದಾಳೆ. ವಚನ ಗಾಯನ, ಹಾರ್ಮೋನಿಯಂ ಜೊತೆ ಫೋನಲ್ಲಿ ನೋಡಿ ಕಲಿಸುತ್ತಿದ್ದೇನೆ ಎಂದರು.

ನಾನು ಕಲರ್ಸ್ ಕನ್ನಡ ದಲ್ಲಿ ಅಡಿಶನ್ ಕೊಟ್ಟಿದ್ದೇನೆ ಹಾಡು ಕರ್ನಾಟಕ ಹಾಗೆ ಜೀ ಕನ್ನಡದಲ್ಲಿ ಸರಿಗಮಪದಲ್ಲಿ ಭಾಗವಹಿಸಿದ್ದೇನೆ. 2024ರಲ್ಲಿ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ನಲ್ಲಿ ಎರಡು ಮಕ್ಕಳ ಜೊತೆ ನಾನು ಕೂಡ ಡಾನ್ಸ್ ಮಾಡಿದ್ದೇನೆ. ಅದರಲ್ಲಿ ನನ್ನ ಚಿಕ್ಕ ಮಗಳು ಅಭಿಶ್ರೀಗೆ ನೀನು ತುಂಬಾ ಚೆನ್ನಾಗಿ ಡಾನ್ಸ್ ಮಾಡ್ತೀಯಾ ಅಂತ ಹೇಳಿ ಪವರ್ ಸ್ಟಾರ್ ಶೀಲ್ಡು ಕೊಟ್ಟಿದ್ರು,

11 ವರ್ಷದ ಅಭಿಶ್ರೀ 27 ರಾಜ್ಯ ಮಟ್ಟದ ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಈಕೆ ಕೂಡ ನೃತ್ಯ ಕ್ಷೇತ್ರದ ಚಿಗುರು ಪ್ರತಿಭೆ. ಶ್ರೀ ವೀರೇಂದ್ರ ಪಾಟೀಲ್ ಪಬ್ಲಿಕ್ ಸ್ಕೂಲ್ ಚಿಂಚೋಳಿಯಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ಅವಳಿ ಸಹೋದರಿಯರು ಓದಿನಲ್ಲಿ ಮುಂದಿರುವರು.

ನೃತ್ಯ ಪ್ರತಿಭೆ ಅಭಿಶ್ರೀ ಇಲ್ಲಿಯವರೆಗೆ ಪಡೆದ ಪ್ರಶಸ್ತಿಗಳು ಕನ್ನಡದ ಚಿನ್ನ ಪ್ರಶಸ್ತಿ. ಕನ್ನಡ ಸಾಹಿತ್ಯ ಸಮ್ಮೇಳನ ಸನ್ಮಾನ, ತಾಲೂಕು ಬಸವ ಕೇಂದ್ರ ಸನ್ಮಾನ, ಡ್ಯಾನ್ಸ್ ಫಾರ್ ಇಂಡಿಯಾ ಬೆಂಗಳೂರು, ಟ್ಯಾಲೆನ್ ಸ್ಟಾರ್ ಅವಾರ್ಡ್ ಬೀದರ್, ಸ್ವಾಮಿ ವಿವೇಕಾನಂದ ಶಾಲೆಯಿಂದ ಸನ್ಮಾನ, ಶ್ರೀ ಹಾಲಪ್ಪಯ್ಯ ವಿರಕ್ತ ಮಠ ಸೇಡಂ ಸನ್ಮಾನ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248